MYSORE LEGISLATIVE ASSEMBLY

EIGHTH DAY.

Friday, 7th August 1959.

The House met in the Assembly Hall, Vidhana Soudha, Bangalore, at Forty Minutes past Eight of the Clock.

MR. SPEAKER (SRI S. R. KANTHI, B.A., LL.B.) in the Chair.

Members' Representation

ಶ್ರೀ ಕುಂದೂರು ರುದ್ರಪ್ಪ (ಚನ್ನಗಿರಿ).—ಸ್ವಾಮಿ, ನಾನು ಒಂದು ವಿಷಯವನ್ನು ನಿವೇದನೆಮಾಡಿ ಕೊಳ್ಳುತ್ತೇನೆ. ಹಿಂದೆ ಈ ಮನೂದೆಯ ಮೇಲಿನ ಚರ್ಚೆಯನ್ನು ಕೆಲವು ದಿವಸಗಳಾದರೂ ಹೆಚ್ಚು ಮಾಡ ಬೇಕೆಂದು ಕೇಳಿದಾಗ ಸಾಧ್ಯವಿದ್ದರೆ ನೋಡೋಣ, ಎಲ್ಲರಿಗೂ ಅವಕಾಶಕೊಡುತ್ತೇನೆಂದು ಅಧ್ಯಕ್ಷರು ಅಪ್ಪಣೆಕೊಡಿಸಿದ್ದರು. ಇವೊತ್ತಿನ ಕಾರ್ಯಕ್ರಮದ ಪಟ್ಟಿಯ ಪ್ರಕಾರ ಈ ದಿನ ಇದರ ಮೇಲಿನ ಚರ್ಚೆ ಮುಗಿಯಬೇಕೆಂದು ಸೂಚಿಸಿದೆ. ದೇಶದಲ್ಲಿ ಉಳಿ ವವರಹಕ್ಕು ಬಾಧ್ಯತೆಗಳನ್ನು ಬದಲಾವಣೆ ಮಾಡುವ ವಿಚಾರವನ್ನು ಮಂಡಿಸುವುದರಿಂದ ನನಗೂ ಮತ್ತು ಇತರ ಮಾನ್ಯ ಮಿತ್ರರಿಗೂ ಮಾತನಾಡಲು ಅವಕಾಶ ಕೊಡಬೇಕು. ಆದುದರಿಂದ ಮೂರು-ನಾಲ್ಕು ದಿವಸ ಈ ಸಭೆಯನ್ನು ಹೆಚ್ಚಿಗೆ ನಡೆಸಬೇಕು. ಇವೊತ್ತೇ ಮುಗಿಸಿದರೆ ನಮ್ಮ ಹಕ್ಕು ಬಾಧ್ಯತೆಗಳಿಗೆ ಧಕ್ಕೆ ಬರುತ್ತದೆ. ನನಗೂ ನನ್ನ ಸಹೋದ್ಯೋಗಿಗಳಿಗೂ ಕೂಡ ಮಾತನಾಡಲು ಅವಕಾಶವನ್ನು ಕೊಡಬೇಕು. ನನಗಂತೂ ಖಂಡಿತ ಅವಕಾಶ ಕೊಡಬೇಕು ಎಂದು ಕೇಳುತ್ತೇನೆ.

ಅಧ್ಯಕ್ಷರು.—ತಾವು ಎರಡು ವಿಷಯಗಳನ್ನು ಎತ್ತಿದ್ದೀರಿ. ತಮಗೂ ಮತ್ತು ತಮ್ಮ ಸ್ನೇಹಿತರಿಗೂ ಮಾತನಾಡಲು ಅವಕಾಶ ಸಿಕ್ಕಬೇಕು ಮತ್ತು ಸಭೆಯನ್ನು ಮುಂದುವರಿಸಬೇಕು ಎಂದು. ಇದರೊಳಗೆ ಮುಖ್ಯವಾದುದು ಯಾವುದು ?

ಶ್ರೀ ಕುಂದೂರು ರುದ್ರಪ್ಪ.—ಎರಡೂ ಮುಖ್ಯ ಸ್ವಾಮಿ.

ಅಧ್ಯಕ್ಷರು.—ಆಗಲಿ ನೋಡೋಣ.

Sri H. S. RUDRAPPA (Honnali).—What Sri Kundur Rudrappa said is that a large number of members want to speak on this Bill. Therefore they are appealing to you and through you to the Government. It is a serious matter to be considered.

MR. SPEAKER.—I have to bring to the notice of the House that the House has accepted today as the last day for discussion on the Bill. But if the House thinks we should continue discussion for a longer time it is for the House to decide so. It is not for me. I should like to say one thing. In the beginning the Hon'ble Members did not avail of the opportunity to speak that was offered to them. Now they are coming in large numbers.

Sri K. PUTTASWAMY (Mysore).—We are habituated to this.

MR. SPEAKER.—However, I would sound the opinion of the Hon'ble Members after some time.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಮಾನ್ಯ ರುದ್ರಪ್ಪನವರು ಹಿಂದೆ ವ್ಯವಸಾಯ ಮಂತ್ರಿಗಳಾಗಿದ್ದವರು. ಅವರು ಹೇಳುವುದರಲ್ಲಿ ಏನೋ ಗೂಢಾರ್ಥವಿದೆ ಎಂದು ಕಾಣುತ್ತದೆ. ಆದ್ದರಿಂದ ಸಭೆಯನ್ನು ಮುಂದುವರಿಸುವುದು ಉತ್ತಮವೆಂದು ಹೇಳುತ್ತೇನೆ.

ಅಧ್ಯಕ್ಷರು.—ಗೂಢಾರ್ಥಬೇಡ. ನೇರವಾದ ಅರ್ಥ ಹೇಳಿದರೆ ಸಾಕು.

Sri V. SRINIVAS SHETTY (Coondapoor).—In view of the fact that a large number of members wish to take part in the debate, Government may be pleased to extend the session by one or two days as to give an opportunity to the members who are very anxious to take part in the debate, lest they should later on say that they have not been given an opportunity to vent their opinions in the House.

Mr. SPEAKER.—I think we can discuss this later.

Sri KADIDAL MANJAPPA (Minister for Revenue).—During the lunch hour, we can discuss this point. As I had spoken to you, Sir, four days ago, the discussion was likely to collapse for want of speakers. That was the situation three days ago.

MYSORE LAND REFORMS BILL, 1958.

Motion to consider–(continued)

*ಶ್ರೀ ಜಿ. ಎಂ. ಚಿನ್ನಸ್ವಾಮಿ (ಬಿಳಿಗೆರೆ).—ಮಾನ್ಯ ಅಧ್ಯಕ್ಷರೇ, ನನಗೆ ಈ ದಿವಸ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ, ನಮ್ಮ ಮು ದಿರುವ ಮೈಸೂರು ಭೂ ಸುಧಾರಣಾ ವ ನೂದೆ ಯನ್ನು ಅನುಮೋದಿಸಿ, ಅದರಲ್ಲಿರುವ ಕೆಲವು ದೋಷದೋಷಗಳನ್ನು ತಿಳಿಸಲು ಎದ್ದು ನಿಂತಿದ್ದೇನೆ. ಅದಕ್ಕೆ ಮೊದಲು ನ ನು ಕೇಳಿಕೊಳ್ಳುವುದೇನೆಂದರೆ ಮಾನ್ಯ ಮಂತ್ರಿಗಳು ಮಾತನಾಡತಕ್ಕವರ ಮೇಲೆ ನಿಗಾ ಇಟ್ಟು ಅವರು ಹೇಳುವುದನ್ನು ಕೇಳಿ ಅದಕ್ಕೆ ಉತ್ತರ ಕೊಡಬೇಕು. ಮಾತನಾಡುವುದೇನಾದರೂ ಇದ್ದರೆ ಮಂತ್ರಿಗಳ ಚೇಂಬರಿನಲ್ಲಿ ಮಾತನಾಡಬಹುದು.

ಶ್ರೀ ಕಡಿದಾಳ್ ಮಂಜಪ್ಪ (ರೆವೆನ್ಯೂ ಮಂತ್ರಿಗಳು).—ಯಾವ ಯಾವ ಸದಸ್ಯರು ಏನೇನು ಹೇಳಿದ್ದಾರೆಂಬುದನ್ನು ಈಗ ಬೇಕಾದರೆ ನಾನು repeat ಮಾಡುತ್ತೇನೆ. ತಾವು ಹೇಳಿದುದನ್ನೂ ಕೇಳಿ ತಿಳಿದುಕೊಳ್ಳುವ ಶಕ್ತಿ ಇದೆ.

ಶ್ರೀ ಜಿ. ಎಂ. ಚಿನ ಸ್ವಾಮಿ.—ಈಗ ಭೂ ಸುಧಾರಣೆ ಮಾಡುತ್ತೇವೆಂದು ಹೊರಟಿದ್ದೀರಿ. ಯಾವುದಾದರೂ ಒಂದು ಸುಧಾರಣೆಯನ್ನು ಮಾಡ ಬೇಕಾದರೆ ಶೇಕಡ 40 ರಷ್ಟು ಜನಗಳಿಗೆ ಅನುಕೂಲ ವಾಗುವಂಥಾದ್ದನ್ನು ಮಾತ್ರ ಮಾಡಬೇಕು. ಎಲ್ಲ ವನ್ನೂ ಬಿಟ್ಟು ಮೊದಲು ಭೂ ಸುಧಾರಣೆಯನ್ನು ಮಾಡುವುದಕ್ಕೆ ಹೊರಟಿರುವುದನ್ನು ನೋಡಿದರೆ ಕನಿಷ್ಠ ಪಕ್ಷ ನೂರಕ್ಕೆ 40 ಜನರಿಗೆ ರಿಲೀಫ್ ಸಿಕ್ಕುತ್ತದೆಯೇ ಎಂಬುದನ್ನು ನೋಡಬೇಕು. ಇವೊತ್ತು ತಿಂಗ ಳೊಂದಕ್ಕೆ ಎಂಟು ಸಾವಿರ, ಹತ್ತು ಸಾವಿರ ರೂಪಾಯಿ ಮನೆ ಬಾಡಿಗೆಯಿಂದ ಬರುತ್ತದೆ, ಅಧಿಕಾರಿಗಳಿಗೆ ಸಂಬಳ ಸಾರಿಗೆಗಳನ್ನು ಹೆಚ್ಚು ಮಾಡಿರುವುದರಿಂದ ಅವರಿಗೂ ಹೆಚ್ಚು ಪರಮಾನವಿದೆ, ಕೈಗಾರಿಕೆಯವರು ತಮಗೆ ಬರುವಷ್ಟು ಉತ್ಪತ್ತಿಯನ್ನೂ ತೆಗೆದುಕೊಳ್ಳುತ್ತಾರೆ. ಇವರ ವಿಚಾರದಲ್ಲಿ ಏನೂ ಮಾಡಿಲ್ಲ. ಮಾನ್ಯ ಮಂತ್ರಿಗಳು ಹೇಳಿರುವಂತೆ ಶೇಕಡ ಎರಡು–ಮೂರ ರಷ್ಟು ಜನರಿಗೆ ಮಾತ್ರ ಸಹಾಯವಾಗುತ್ತದೆ. ರೈತರಿಂದ ತೆಗೆದುಕೊಳ್ಳತಕ್ಕ ಭೂಮಿಗಿಂತಲೂ ಸರ್ಕಾರದಲ್ಲಿ ಬೇಕಾದಷ್ಟು ಭೂಮಿ ಇದೆ. ಅದನ್ನು ಕೂಡ ಹಂಚಬಹುದು. ಸರ್ಕಾರದಲ್ಲಿರುವ ಭೂಮಿ ಯನ್ನು ಹಂಚಿ ಅನಂತರ ಜಮೀನ್ದಾರರ ಹತ್ತಿರವಿರುವು ದನ್ನು ತೆಗೆದುಕೊಳ್ಳುತ್ತೇವೆ ಎಂದರೆ ಸರಿ. ಭೂ ಸುಧಾರಣೆಯೊಂದರಿಂದಲೇ ಎಲ್ಲವೂ ಸರಿಹೋಗುತ್ತ ದೆಂದು ತಿಳಿದುಕೊಳ್ಳಬಾರದು ನಮ್ಮ ದೇಶದಲ್ಲಿ ಜನಸಂಖ್ಯೆ ಜಾಸ್ತಿ ಇದೆ. ಎಲ್ಲರಿಗೂ ಸಿಕ್ಕಬೇಕಾದರೆ. ಹೊಟ್ಟೆ ಬಟ್ಟೆಗೆ ತೃಪ್ತಿಯಾಗುವಷ್ಟು ಸಿಕ್ಕಬೇಕಾದರೆ ಭೂ ಸುಧಾರಣೆಯಿಂದ ಆಗುವುದಿಲ್ಲ. ಕೈಗಾರಿಕೆ ಗಳನ್ನು ಹೆಚ್ಚಿಸಲು ಒಂದು ಯೋಜನೆಯನ್ನು ಹಾಕ ಬೇಕು. ರೈತನಿಗೆ ಇಷ್ಟೇ ಉತ್ಪತ್ತಿ ಇರಬೇಕು ಇಷ್ಟೇ ಖರ್ಚು ಮಾಡಬೇಕೆಂದು ಹೇಳುವಾಗ ರಾಯರುಗಳು, ಡಾಕ್ಟರುಗಳು ಸಂಬಳವನ್ನು ತೆಗೆದು ಕೊಳ್ಳುವವರು, ಮನೆ ಬಾಡಿಗೆ ತೆಗೆದುಕೊಳ್ಳುವವರು ಮತ್ತು ಇತರರಿಗೆಲ್ಲ exemption ಇದೆ. ಅವರು ಹೇಗಾದರೂ ಇರಬಹುದು, ಎಷ್ಟು ಬೇಕಾದರೂ ಸಂಪಾದನೆ ಮಾಡಬಹುದು, ಎಷ್ಟು ಬೇಕಾದರೂ ಖರ್ಚು ಮಾಡಬಹುದು. ಆದರೆ ರೈತ ಅಷ್ಟರಮಟ್ಟಿಗೆ ಹೋಗಬಾರದೆಂದು ಹೇಳುತ್ತೀರಿ. ನೀವು ಹೇಳುವ ಪ್ರಕಾರ ಖರ್ಚು ಸಾಕೇ?

ರ್ಯಾಂಡ್ ಕಮಿಷನ್ ಮಾಡಿದ್ದೀರಿ. ಅವರು ಒಂದೇ ಸ್ಥಳದಲ್ಲಿ ಕುಳಿತು ಕೆಲಸ ಮಾಡುತ್ತಾರೆಯೇ? ಅಥವಾ ಜಿಲ್ಲಾವಾರು ಪ್ರವಾಸ ಹೋಗಿ ಅಲ್ಲಿ ರೈತರ ಕಷ್ಟ ಸುಖಗಳನ್ನು ತಿಳಿದುಕೊಂಡು, 1952-53ರ ಲೆಕ್ಕ ಗಳನ್ನು ನೋಡಿಕೊಂಡು ಅದರ ಪ್ರಕಾರ ಒಂದು ತೀರ್ಮಾನವನ್ನು ಕೊಡುತ್ತಾರೆಯೇ ಗೊತ್ತಿಲ್ಲ. ಅವರು ಒಂದೇ ಕಡೆ ಕುಳಿತು ಅಂಕಿ ಅಂಶಗಳನ್ನು ತರಿಸಿ ಕೊಂಡು ಕೆಲಸಮಾಡುವುದಾದರೆ ಅದನ್ನು ನಾನು ಖಂಡಿಸುತ್ತೇನೆ. ಶ್ರೀರಂಗಪಟ್ಟಣದ ಒಳ ಒಂದು ಎಕರೆಗೆ ಹದಿನೈದು ಪಲ್ಲ ಬತ್ತ ಬೆಳೆಯುತ್ತದೆಂದು ಹೇಳಿದರೆ ಅದಕ್ಕಿಂತ ಕಡಮೆಯಾಗಿ ಬೆಳೆಯುವ ಪ್ರದೇಶಗಳೂ ಇವೆ ಎಂದು ತಮಗೆ ಗೊತ್ತಿದೆ. ಮಾನ್ಯ ಮಂತ್ರಿಗಳು ಬಹಳ ಅನುಭವಸ್ಥರು, ಇತರ ಪ್ರದೇಶಗಳಲ್ಲಿ ಯಾವರೀತಿ yield ಇದೆ ಎಂಬು ದನ್ನು ತಿಳಿದುಕೊಂಡು ಕೆಲಸ ಮಾಡಬೇಕು. ರ್ಯಾಂಡ್ ಕಮಿಷನ್ ಅವರು ವಿಧಾನ ಸೌಧದಲ್ಲಿ ಅಥವಾ ಮತ್ತೊಂದು ಕಡೆ ಕುಳಿತು ತೀರ್ಮಾನಗಳನ್ನು ತೆಗೆದು ಕೊಳ್ಳಬಾರದು. ಕಮಿಷನ್ ತಾಲ್ಲೂಕುವಾರ್ ಹೋಗಬೇಕು. ಕಮಿಷನ್‌ನ್ನು ಮಾಡಲೇಬೇಕು; ಅದೂ ಇಲ್ಲದೆ ಕೆಲಸ ಸಾಧ್ಯವಿಲ್ಲ. ಜಿತ್ತಿ ಕಮಿಟಿ ಯವರು ರಿಪೋರ್ಟು ತಯಾರುಮಾಡುವಾಗ, ಟೂರ್ ಮಾಡಿದಹಾಗೆ ಟೂರ್ ಮಾಡಬೇಕು. ಯಾವ ಯಾವ ಭೂಮಿ ಹೇಗಿದೆ ಎನ್ನುವುದನ್ನು ತಿಳಿದು ವಿಂಗಡಣೆ ಮಾಡಬೇಕು. ಒಂದೇ ಕಡೆ ಕುಳಿತು ಕೆಲಸ ಮಾಡಿದರೆ ಉಪಯೋಗವಿಲ್ಲ.

ವ್ಯವಸಾಯದ ಉತ್ಪತ್ತಿ, ಖರ್ಚು ಹೇಳಿದ್ದೀರಿ. ಅದನ್ನು ಯಾವ ಆಧಾರದ ಮೇಲೆ ಹೇಳಿದ್ದೀರಿ ಎನ್ನುವುದು ನನಗೆ ಗೊತ್ತಿಲ್ಲ. ಒಂದು ಎಕರೆಯಿಂದ ಹದಿನೈದು ಪಲ್ಲ ಭತ್ತ ಬೆಳೆದರೆ, ಮುನ್ನೂರು ರೂಪಾಯಿ ಅದರ ಖರೀದಿಯಾಗುತ್ತದೆ. ಆದ್ದರಿಂದ ಒಂದು ಎಕರೆ ಭೂಮಿಯಿಂದ, ಖರ್ಚು ಕಳೆದು 150 ರೂಪಾಯಿ ಬರುತ್ತದೆಂದು ಒಂದು ಫಿಗರ್ ಕೋಟ್ ಮಾಡಿದ್ದೀರಿ. ಒಂದು ಎಕರೆ ಭತ್ತದ ಉತ್ಪತ್ತಿಯ, ಅರ್ಧದಷ್ಟು ಖರ್ಚಿಗೆ ಸಾಕು ಎಂದು ಯಾವ ಜನಗಳಿಂದ ತಿಳಿದುಕೊಂಡರೋ ಗೊತ್ತಿಲ್ಲ. ನಾನೂ ಸ್ವಂತ ವ್ಯವಸಾಯ ಮಾಡಿಸುತ್ತಾ ಇದ್ದೇನೆ.

* Asterisk indicates that the remarks or speeches have not been revised by the member concerned.